# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 13.03.2018 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು:**

1. **ಪ್ರೊ. ಕೆ. ಭೈರಪ್ಪ** — **ಅಧ್ಯಕ್ಷರು**
   ಕುಲಪತಿಗಳು
   ಮಂಗಳೂರು ವಿಶ್ವವಿದ್ಯಾನಿಲಯ,
   **ಮಂಗಳಗಂಗೋತ್ರಿ–574 199.**
2. **ಶ್ರೀ ಮಹೇಶ್ ರಾವ್.** — **ಸದಸ್ಯರು**
   ಜಂಟಿ ನಿರ್ದೇಶಕರು
   ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಮಂಗಳೂರು
   (ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ)
3. **ಡಾ. ಈಶ್ವರ ಪಿ.** — –"–
   ಡೀನರು, ವಾಣಿಜ್ಯ ನಿಕಾಯ
   ಮತ್ತು ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ
   ಮಂಗಳೂರು ವಿಶ್ವವಿದ್ಯಾನಿಲಯ
   **ಮಂಗಳಗಂಗೋತ್ರಿ–574 199.**
4. **ಶ್ರೀ ಹರೀಶ್ ಆಚಾರ್,** — –"–
   ಜಿ ನ್ ರಾಘವ ಆಚಾರ್,
   "ರಕ್ಷಾ", ವಿ.ಎಸ್.ಎಸ್. ಬ್ಯಾಂಕಿನ ಹತ್ತಿರ,
   ನಾಗುರಿ ಕಂಕನಾಡಿ –575 002 **ಮಂಗಳೂರು.**
5. **ಪ್ರೊ. ಬಿ. ರಹಮತ್ ಆಲಿ** — –"–
   ಪ್ರಾಂಶುಪಾಲರು, ಬದ್ರಿಯಾ ಪ್ರಥಮ ದರ್ಜೆ ಕಾಲೇಜು
   ಕಂದಕ, **ಮಂಗಳೂರು – 575 001**
6. **ಪ್ರೊ. ಗಣಪತಿ ಭಟ್** — –"–
   ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು,
   **ಪೂಂಜಾಲಕಟ್ಟೆ – 574 233**
7. **ಡಾ. ಯು. ಶಾ ಾ ರಾವ್,** — –"–
   **ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು,**
   **ಕಾವೂರು ಮಂಗಳೂರು – 575 015.**
8. **ಶ್ರೀ ಟಿ. ನಾರಾಯಣ ಗೌಡ** — –"–
   ಪ್ರಾಂಶುಪಾಲರು
   ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ
   **ದಕ್ಷಿಣ ಕನ್ನಡ, ಮಂಗಳೂರು 575001.**
   (ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ)
9. **ಪ್ರೊ. ಎ. ಎಂ. ಖಾನ್** — –"–
   ಕುಲಸಚಿವರು (ಪರೀಕ್ಷಾಂಗ)
   ಮಂಗಳೂರು ವಿಶ್ವವಿದ್ಯಾನಿಲಯ
   **ಮಂಗಳಗಂಗೋತ್ರಿ–574 199.**
10. [illegible] — –"–
    ಕುಲಸಚಿವರು (ಆಡಳಿತ)
    ಮಂಗಳೂರು ವಿಶ್ವವಿದ್ಯಾನಿಲಯ
    **ಮಂಗಳಗಂಗೋತ್ರಿ–574 199.**

**ವಿಶೇಷ ಆಹ್ವಾನಿತರು:**

11. **ಡಾ. ದಯಾನಂದ ನಾಯ್ಕ್** — –"–
    ಹಣಕಾಸಿನ ಅಧಿಕಾರಿ (ಪ್ರಭಾರ)
    ಮಂಗಳೂರು ವಿಶ್ವವಿದ್ಯಾನಿಲಯ
    **ಮಂಗಳಗಂಗೋತ್ರಿ–574 199.**

**ಅನುಪಸ್ಥಿತ ಸದಸ್ಯರು:**

1. **ತಾಂತ್ರಿಕ ಶಿಕ್ಷಣ ನಿರ್ದೇಶಕರು** **ಸದಸ್ಯರು**
   ಕರ್ನಾಟಕ ರಾಜ್ಯ
   ಅರಮನೆ ರಸ್ತೆ, ಬೆಂಗಳೂರು – 560 001.

2. **ಶ್ರೀ ಅಶೋಕ್ ಕುಮಾರ್ ರೈ,** – " –
   "ಅನುರಾಗ್", ಡಿ. ನಂ.–2–30–2484/1
   ಕಾಸ್ಮಸ್ ಲೇನ್, ಕದ್ರಿ ಕಂಬ್ಳ, ಮಂಗಳೂರು

3. **ಪ್ರೊ. ಸತ್ಯನಾರಾಯಣ ಭಟ್,** – " –
   ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು ,
   ಸಿದ್ಧಕಟ್ಟೆ, ಬಂಟ್ವಾಳ – 574 237.

4. **ವೈದ್ಯಕೀಯ ಶಿಕ್ಷಣ ನಿರ್ದೇಶಕರು** – " –
   ಕರ್ನಾಟಕ ರಾಜ್ಯ, ಆನಂದರಾವ್ ವೃತ್ತ
   ಬೆಂಗಳೂರು – 560 009.

5. **ನಿರ್ದೇಶಕರು**
   ಪದವಿ ಪೂರ್ವ ಶಿಕ್ಷಣ ಇಲಾಖೆ
   ಪದವಿ ಪೂರ್ವ ಶಿಕ್ಷಣ ಭವನ, – " –
   18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ
   ಮಲ್ಲೇಶ್ವರಂ, ಬೆಂಗಳೂರು 560 003.

*********

# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 13.03.2018 ರಂದು ಅಪರಾಹ್ನ ಗಂಟೆ 3.30ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಮಾನ್ಯ ಕುಲಪತಿಯವರು ಪ್ರಾರಂಭದಲ್ಲಿ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**ಪ್ರಾರಂಭಿಕ**

1. ಡೀನರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಸದಸ್ಯರಾಗಿ ಮಾನ್ಯ ಕುಲಪತಿಯವರಿಂದ ನಾಮ ನಿರ್ದೇಶನಗೊಂಡ ಡಾ.ಈಶ್ವರ ಪಿ., ಡೀನರು, ವಾಣಿಜ್ಯ ನಿಕಾಯ ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಸ್ವಾಗತಿಸಿದರು.
2. ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು ಇವರ ಪರವಾಗಿ ಸಿಂಡಿಕೇಟ್ ಸಭೆಗೆ ಹಾಜರಾದ ಶ್ರೀ ಮಹೇಶ್ ರಾವ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮಂಗಳೂರು ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಸ್ವಾಗತಿಸಿದರು.
3. ಡೀನರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಸದಸ್ಯರಾಗಿ ಮಾನ್ಯ ಕುಲಪತಿಯವರಿಂದ ನಾಮ ನಿರ್ದೇಶನಗೊಂಡ ಡಾ. ಜೆ. ಈಶ್ವರ ಭಟ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರ ಸದಸ್ಯತ್ವದ ಅವಧಿಯು ಕೊನೆಗೊಂಡು ಸದಸ್ಯತ್ವದಿಂದ ಮುಕ್ತಗೊಂಡಿರುವ ಹಿನ್ನೆಲೆಯಲ್ಲಿ ಸದರಿಯವರು ಸಿಂಡಿಕೇಟ್ ಸದಸ್ಯರಾಗಿ ಸಲ್ಲಿಸಿದ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.
4. ಮಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಸಚಿವರು (ಪರೀಕ್ಷಾಂಗ) ಆಗಿದ್ದ ಪ್ರೊ.ಐ.ಚಿಕ್ಕಪ್ಪ ರೈ (84 ವರ್ಷ) ಇವರು ದಿನಾಂಕ 08.03.2018ರಂದು ಅಕಾಲ ನಿಧನರಾಗಿರುವ ವಿಚಾರವನ್ನು ಸಭೆಯಲ್ಲಿ ತಿಳಿಸಿ ಇವರು ತಮ್ಮ ಸೇವಾ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಶೈಕ್ಷಣಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿರುವುದನ್ನು ಶ್ಲಾಘಿಸಿ ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ವಿ.ಸ.2:1(2018)**

**ವಿಷಯ:** ದಿನಾಂಕ 01.01.2008ರಿಂದ ಜಾರಿಗೊಂಡ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಎಡ್ವಾನ್ಸ್‌ಮೆಂಟ್ ಸ್ಕೀಂ ಪ್ರಕಾರ ವಿಶ್ವವಿದ್ಯಾನಿಲಯ / ಸ್ನಾತಕೋತ್ತರ ಕೇಂದ್ರ / ಘಟಕ ಕಾಲೇಜುಗಳ ಬೋಧಕರಿಗೆ ಮುಂಬಡ್ತಿ – ಸ್ಕ್ರೀನಿಂಗ್ – ಕಂ – ಇವ್ಯಾಲ್ಯುವೇಶನ್ / ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಸ್ಕ್ರೀನಿಂಗ್ – ಕಂ – ಇವ್ಯಾಲ್ಯುವೇಶನ್ / ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡೀಇವಿ: ವಿ.ಸ.2:2(2018)**

**ವಿಷಯ:** National Institute of Malaria Research, ಬೆಂಗಳೂರು ಹಾಗೂ Council of Scientific and Industrial Research, Trivendrum ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** National Institute of Malaria Research, ಬೆಂಗಳೂರು ಇವರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. Council of Scientific and Industrial Research, Trivendrum ಇವರ ಒಡಂಬಡಿಕೆಯಲ್ಲಿ ನಿರ್ದೇಶಕರ ಪದನಾಮವನ್ನು ತಿದ್ದುಪಡಿ ಮಾಡಿ ಮಂಡಿಸಲ್ಲಿಸಲು ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ: ವಿ.ಸ.2:3(2018)**

**ವಿಷಯ:** ಉಡುಪಿ ಜಿಲ್ಲೆಯ ಬೆಳಪುವಿನಲ್ಲಿ ಅತ್ಯಾಧುನಿಕ ಸಂಶೋಧನಾ ಕೇಂದ್ರವನ್ನು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಆವರಣದಲ್ಲಿ ವಿವಿಧ ಕಟ್ಟಡಗಳ ನಿರ್ಮಾಣ ಕಾಮಗಾರಿಗಾಗಿ ಕರಡು ಒಡಂಬಡಿಕೆಯನ್ನು ಅನುಮೋದಿಸುವ ಕುರಿತು.

**ನಿರ್ಣಯ:** ಒಡಂಬಡಿಕೆಯ ವಿವರಣೆ ಕ್ರ.ಸಂ.15ರಲ್ಲಿ 'ಉದ್ದೇಶಿತ ಯೋಜನೆಗಳ ಕಾಮಗಾರಿ ಅಂದಾಜಿಗೆ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು ಇವರು ಕಾಮಗಾರಿಯ ಪ್ರಗತಿಗೆ ಅನುಗುಣವಾಗಿ ಮೊತ್ತವನ್ನು ಆರು ಸಮಾನ ಕಂತುಗಳಲ್ಲಿ ಕರ್ನಾಟಕ ಗೃಹ ಮಂಡಳಿಗೆ ಬಿಡುಗಡೆ ಮಾಡತಕ್ಕದ್ದು' ಎಂದು ತಿದ್ದುಪಡಿ ಮಾಡಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ. ಘಟಕ: ವಿ.ಸ.2:4(2018)**

**ವಿಷಯ:** ಪರಿಶಿಷ್ಟ ಜಾತಿ /ಪಂಗಡದ ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯವೇತನವನ್ನು 5 ವರ್ಷಗಳ ಅವಧಿಗೆ ನೀಡುವ ಬಗ್ಗೆ.

**ನಿರ್ಣಯ:** ಪರಿಶಿಷ್ಟ ಜಾತಿ /ಪಂಗಡದ ಸಂಶೋಧನಾ ವಿದ್ಯಾರ್ಥಿಗಳ ಬೇಡಿಕೆಗಳ ಬಗ್ಗೆ ಚರ್ಚಿಸುತ್ತಾ, ಈ ಕೆಳಗಿನಂತೆ ಕ್ರಮಕೈಗೊಳ್ಳಲಾಯಿತು.

ಅ) ಪಿಹೆಚ್.ಡಿ ಕೋರ್ಸಿನ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ವಿಸ್ತರಿಸುವ ಬಗ್ಗೆ ಸದರಿ ವಿಷಯದ Doctoral Committeeಯ ಅನುಮೋದನೆ ಮತ್ತು ಶಿಫಾರಸ್ಸಿನೊಂದಿಗೆ 3+1+1 ಅವಧಿಗೆ ವಿಸ್ತರಿಸುವುದಾಗಿ ನಿರ್ಣಯಿಸಲಾಯಿತು.

ಆ) ದಲಿತ ವಿದ್ಯಾರ್ಥಿಗಳ ವಾಸ್ತವ್ಯಕ್ಕಾಗಿ ಪ್ರತ್ಯೇಕ ವಸತಿನಿಲಯ ಕಟ್ಟುವುದು ಸೂಕ್ತವಲ್ಲ, ಮತ್ತು ಎಲ್ಲಾ ಇತರ ವಿದ್ಯಾರ್ಥಿಗಳ ಜೊತೆ ಬೆರೆತು ವ್ಯಕ್ತಿ ವಿಕಸನ ಮಾಡಿಕೊಳ್ಳಲು ಅನುವುವಾಗುವಂತೆ ಇದ್ದ ವಸತಿನಿಲಯದಲ್ಲಿ ಇನ್ನೊಂದು ಅಂತಸ್ತಿನ ನಿರ್ಮಾಣದ ಬಗ್ಗೆ ಕ್ರಮ ಕೈಗೊಳ್ಳಲು ನಿರ್ಧರಿಸಲಾಯಿತು.

ಇ) ವಿದ್ಯಾರ್ಥಿಗಳು ದಲಿತ ವಿರೋಧಿ ಆಡಳಿತ ಎಂದು ಆಪಾದಿಸಿರುವುದರಿಂದ ಸಿಂಡಿಕೇಟು ಸಭೆಯು ಈ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಿ ವಿಶ್ವವಿದ್ಯಾನಿಲಯದಲ್ಲಿ ನಿಜವಾಗಿಯೂ ಇಂತಹ ದೌರ್ಜನ್ಯ ನಡೆಯುತ್ತಿದೆಯೇ ಎಂದು ಪರಿಶೀಲಿಸಿ ವರದಿ ಸಲ್ಲಿಸಲು ಈ ಕೆಳಗಿನಂತೆ ಉನ್ನತ ಮಟ್ಟದ ಬಾಹ್ಯ ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು.

1. ಶ್ರೀ ರುದ್ರಪ್ಪ ಹನಗವಾಡಿ (ನಿವೃತ್ತ ಜಿಲ್ಲಾಧಿಕಾರಿಗಳು) – ಅಧ್ಯಕ್ಷರು
2. ಶ್ರೀ ಗುರುವಪ್ಪ ಬಾಳೇಪುಣಿ (Chief Correspondence, ಹೊಸದಿಗಂತ ದಿನ ಪತ್ರಿಕೆ ) – ಸದಸ್ಯರು
3. ಪ್ರೊ.ಮಹಾದೇವು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು. – ಸದಸ್ಯರು
4. ಡಾ. ಸಂತೋಷ್ .ಜಿ., ಸಹಾಯಕ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ – ಸದಸ್ಯರು
5. ಶ್ರೀಮತಿ ಚೈತ್ರ ಹಿರಿಯ ವಕೀಲರು, ನಿತ್ಯಾನಂದ ಕಾಂಪ್ಲೆಕ್ಸ್ ಕೆನರಾ ಶಾಲೆ ಹತ್ತಿರ, ಮಂಗಳೂರು –3. – ಸದಸ್ಯರು
6. ಕುಲಸಚಿವರು – ಸದಸ್ಯ ಕಾರ್ಯದರ್ಶಿ

ಈ) ಶ್ರೀ ರಮೇಶ್ ಮಾದರ, ಸಂಶೋಧನಾ ವಿದ್ಯಾರ್ಥಿ, ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಸದರಿಯವರ ಮಾರ್ಗದರ್ಶಕರು ಸಂಶೋಧನಾ ವಿದ್ಯಾರ್ಥಿಯಾಗಿ ಮುಂದುವರಿಸಲು ನಿರಾಕರಿಸಿರುವ ಕಾರಣ ಸದರಿ ಸಂಶೋಧನಾ ವಿದ್ಯಾರ್ಥಿಯು ಯಾವ ವಿಷಯದಲ್ಲಿ ಸಂಶೋಧನಾ ಕಾರ್ಯವನ್ನು ಮುಂದುವರಿಸಬಹುದು ಎಂದು ಪರಿಗಣಿಸಲು ಹಿರಿಯ ಡೀನರಾದ ಪ್ರೊ.ಜೆ.ಈಶ್ವರ ಭಟ್‌ರವರ ಅಧ್ಯಕ್ಷತೆಯಲ್ಲಿ ಉಳಿದ ನಿಕಾಯಗಳ ಡೀನರುಗಳು ಮತ್ತು ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯ ಇವರನ್ನೊಳಗೊಂಡ ಸಮಿತಿಯನ್ನು ರಚಿಸುವುದಾಗಿ ನಿರ್ಣಯಿಸಲಾಯಿತು.

ಉ) ವಸತಿನಿಲಯಗಳ ಶುಲ್ಕಗಳ ಮುಂಗಡ ಪಾವತಿಯನ್ನು ಪಡೆಯದಿರಲು ನಿರ್ಧರಿಸಲಾಯಿತು.

ಊ) ಪಿ.ಹೆಚ್.ಡಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವ ಸಂದರ್ಭದಲ್ಲಿ ಅದನ್ನು ಹಿಂತಿರುಗಿಸ ಬೇಕೆಂಬ ಮುಚ್ಚಳಿಕೆ ಪತ್ರದಲ್ಲಿರುವ ಷರತ್ತನ್ನು ಹಿಂಪಡೆಯಲು ನಿರ್ಣಯಿಸಲಾಯಿತು.

ಋ) ಅಂಬೇಡ್ಕರ್ ಭವನ ನಿರ್ಮಾಣದ ಬಗ್ಗೆ ಪ್ರೊ.ವಿಶ್ವನಾಥ ಅವರಿಂದ ಅವಶ್ಯ ವಿವರವನ್ನು ಪಡೆಯಲು ನಿರ್ಣಯಿಸಲಾಯಿತು.

ಎ) ಬಿ.ಪಿಎಡ್. ಕೋರ್ಸಿಗೆ ಎನ್.ಸಿ.ಇ.ಟಿ.ಯಿಂದ ಅನುಮತಿ ಶೀಘ್ರದಲ್ಲಿ ಬರುವ ಸಾಧ್ಯತೆಯ ಹಿನ್ನಲೆಯಲ್ಲಿ ಈ ಕೋರ್ಸು ಪ್ರಾರಂಭಿಸುವ ಕ್ರಮ ಜರುಗಿಸಲಾಗಿರುತ್ತದೆ.

ಏ) ಪರಿಶಿಷ್ಟ ಜಾತಿ /ಪಂಗಡದ Standing Committee ಸಮಿತಿ ಸಭೆಯನ್ನು ವರ್ಷಕ್ಕೆ ಎರಡು ಬಾರಿ (ಫೆಬ್ರವರಿ ಮತ್ತು ಜುಲೈ) ಕರೆಯಲು ನಿರ್ಣಯಿಸಲಾಯಿತು.

ಐ) ಅಂಬೇಡ್ಕರ್ ಜಯಂತಿಯನ್ನು ಅದೇ ದಿನದಂದು ಆಚರಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ವಿ.ಸ.2:5(2018)**

**ವಿಷಯ:** ವಿಶ್ವವಿದ್ಯಾನಿಲಯದಲ್ಲಿ ಖಾಲಿಯಿರುವ ಬೋಧಕೇತರ ಹುದ್ದೆಗಳಿಗೆ ಪರಿಷ್ಕೃತ ಜೇಷ್ಠತಾ ಪಟ್ಟಿಗೆ ಅನುಗುಣವಾಗಿ ಸ್ವತಂತ್ರ ಪ್ರಭಾರ ನೀಡುವ ಬಗ್ಗೆ.

**ನಿರ್ಣಯ:** ಈಗಾಗಲೇ ದಿನಾಂಕ 09.11.2017ರಂದು ನಡೆದ ಸಿಂಡಿಕೇಟು ಸಭೆಯ ನಿರ್ಣಯದಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 32ರಡಿಯ ಷರತ್ತುಗಳಿಗೊಳಪಟ್ಟು ಅರ್ಹತೆ ಹಾಗೂ ಜೇಷ್ಠತೆಯನ್ನು ಹೊಂದಿದ ಉದ್ಯೋಗಿಗಳಿಗೆ ಸ್ವತಂತ್ರ ಪ್ರಭಾರ ನೀಡುವ ಬಗ್ಗೆ ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಗಿರುತ್ತದೆ.

ವಿವಿಧ ಹುದ್ದೆಗಳಿಗೆ ಸ್ವತಂತ್ರ ಪ್ರಭಾರ ನೀಡಲು ಪ್ರಸ್ತಾಪಿಸಿರುವ ಸಿಬ್ಬಂದಿಗಳ ವಿವರವನ್ನು ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದು ಸುದೀರ್ಘವಾಗಿ ಚರ್ಚಿಸಲಾಗಿ ನಂತರ ಉಪಕುಲಸಚಿವ ಹುದ್ದೆಯನ್ನು ಹೊರತುಪಡಿಸಿ ಖಾಲಿಯಿರುವ ಉಳಿದ ವಿವಿಧ ಹುದ್ದೆಗಳಿಗೆ ಎದುರಾಗಿ ಸ್ವತಂತ್ರ ಪ್ರಭಾರ ನೀಡಲು ಸಭೆಯಲ್ಲಿ ಸೂಚಿಸಲಾಯಿತು. ಉಪಕುಲಸಚಿವ ಹುದ್ದೆಯ ಸ್ವತಂತ್ರ ಪ್ರಭಾರ ನೀಡುವ ಬಗ್ಗೆಯೂ ಶೀಘ್ರದಲ್ಲಿಯೇ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಲಾಯಿತು.

**ಇತರ ವಿಷಯಗಳು:**

ಡಾ.ಉಮೇಶ್ ನಾಯ್ಕ್, ಸಹಾಯಕ ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರು ಪದೇ ಪದೇ ವಿದ್ಯಾರ್ಥಿಗಳ ಬಗ್ಗೆ, ವಿಭಾಗದ ಅಧ್ಯಕ್ಷರ ಬಗ್ಗೆ ಹಾಗೂ ವಿಶ್ವವಿದ್ಯಾನಿಲಯದ ಇತರೆ ಸಿಬ್ಬಂದಿಗಳ ಬಗ್ಗೆ ದೂರು ನೀಡುತ್ತಿರುವುದು ಹಾಗೆಯೇ ವಿದ್ಯಾರ್ಥಿಗಳು ಮತ್ತು ಅಧ್ಯಕ್ಷರು ಸದರಿಯವರ ವರ್ತನೆಯ ಬಗ್ಗೆ ದೂರುಗಳನ್ನು ನೀಡುತ್ತಿರುವುದರಿಂದ ಪರಸ್ಪರ ಸಂಧಾನ ಮಾಡಿಸಲು ಕಷ್ಟ ಸಾಧ್ಯವಾಗಿದೆ. ಮುಂದುವರಿದು ವಿದ್ಯಾರ್ಥಿಗಳು ಅವರ ಬಗ್ಗೆ SPARSH ಸಮಿತಿಗೆ ದೂರು ನೀಡಿದ್ದು ವಿಚಾರಣೆ ನಡೆಯುತ್ತಿದೆ. ಆದರೆ ಡಾ.ಉಮೇಶ್ ನಾಯ್ಕ್ ಅವರು SPARSH ಸಮಿತಿ ರಚನೆಯ ಬಗ್ಗೆಯೇ ಪ್ರಶ್ನೆ ಹಾಕಿರುವ ಹಿನ್ನೆಲೆಯಲ್ಲಿ ವಿಭಾಗದ ವಿದ್ಯಾರ್ಥಿಗಳು, ಅಧ್ಯಕ್ಷರು, ಡಾ.ಉಮೇಶ್ ನಾಯ್ಕ್ ಎಲ್ಲರ ದೂರುಗಳನ್ನು ಈ ಮೇಲೆ ರಚಿಸಿದ ಉನ್ನತ ಮಟ್ಟದ ಬಾಹ್ಯ ಸದಸ್ಯರ ಸಮಿತಿಯ ಮುಂದೆ ಮಂಡಿಸಿ ಪರಿಶೀಲಿಸಿ ವರದಿ ಪಡೆಯಲು ನಿರ್ಣಯಿಸಲಾಯಿತು.

ಈ ವಿಷಯವನ್ನು ಪ್ರತ್ಯೇಕ ವಿಷಯ ಎಂದು ಪರಿಗಣಿಸಿ ಮೇಲಿನ ಸಮಿತಿಗೆ ರವಾನಿಸುವುದು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು